ದುಂಡು ಮುಖ, ವಿಶಾಲವಾದ ಕಂಗಳು. ನೋಟದ ಆಕರ್ಷಣೆ ಮಾಸಿದರೂ ಆನಂದದ ಹೊಳಪಿದೆ. ಈಗ ಸಂಪೂರ್ಣ ನಿರಾಭರಣ ಸುಂದರಿ. ಕೆನ್ನೆಗಳು ಕೊಂಚ ಬತ್ತಿವೆ. ತಕ್ಷಣ ಗುರುತು ಸಿಗುವದು ಕಷ್ಟ. "ನೀನೇ ಧನ್ಯೆ ಕಣೆ ವಲ್ಲಿ. ಮಿನುಗುವ ಬದುಕನ್ನು ಧಿಕ್ಕರಿಸಿ ಪ್ರೀತಿಗೆ ಸೋತೆಯಲ್ಲ. ಅವನೂ ಅಷ್ಟೆ, ಮನವೇ ಮುಖ್ಯವೆಂದು ಮದುವೆಯಾದನಲ್ಲ. ತುಂಬಾ ಸಂತೋಷವಾಯಿತು ಮಗು. ಎಲ್ಲಿ... ಆ ಮೇಲಿನ ಪೆಟ್ಟಿಗೆ ತೆಗಿ" ಎಂದು ತೆಗೆಸಿದರು. ಅದರಲ್ಲಿನ ಹಿತ್ತಾಳೆ ಡಬ್ಬಿಯಲ್ಲಿದ್ದ ಮಾಂಗಲ್ಯವನ್ನು ಹೊರತೆಗೆದು, "ಎಲ್ಲಾ ಕೇಳಿಸ್ಕೊಂಡಿದೀನಿ. ಒಳಗೆ ಬಾರೋ ತಂಗವೇಲು" ಎಂದು ಕೂಗಿದರು. ಅಳುಕುತ್ತ ಒಳಬಂದು ಕಾಲಿಗೆರಗಿದವನಿಗೆ, "ಇದು ಚಿನ್ನದ್ದೇ ಕಣೋ. ತವರಿನಲ್ಲಿ ತುಳಸಿಗೇಂತ ಕೊಟ್ಟಿದ್ದು. ನನ್ನ ಸೊಸೆಗೆ ಗೊತ್ತಿಲ್ಲ. ಪಕ್ಕದ ಬೀದಿಯ ಕಲ್ಯಾಣ ಮಂಟಪದಲ್ಲಿ ಮಂಗಳ ವಾದ್ಯ ಮೊಳಗುತ್ತಿದೆ. ಸುಮೂಹೂರ್ತದಲ್ಲಿ ಕಟ್ಟು" ಎಂದು ತಾಳಿ ಕೊಟ್ಟರು. ಎರಡು ಕಂಗಳ ಮಿಲನದಲ್ಲಿ ಅಚ್ಚರಿಯೊಂದಿಗೆ ಆನಂದ. ಪಟ್ಟ ಕಷ್ಟವೆಲ್ಲ ಹಿಂದಾಯಿತು. "ನೂರ್ಕಾಲ ಸುಖವಾಗಿ ಬಾಳಿ" ಎಂಬ ಸುಭದ್ರಮ್ಮನ ಹರಕೆ ಕೇಳಿಸಿತು. ತಂಗವೇಲು, "ಆದರೆ ಒಂದೇ ತೊಂದರೆ ಅಮ್ಮ. ಕೊಂಚ ಕೋಪ ಬಂದರೂ ಕೊಡಪಾನವನ್ನೆತ್ತಿ ಸುರೀತಾಳೆ" ಎಂದ. ವಲ್ಲಿ ಹುಸಿಕೋಪದಿಂದ ಒಂದು ಏಟು ಕೊಟ್ಟೇಬಿಟ್ಟಳು. ಅಂಗಳದ ರಂಗವಲ್ಲಿಯೂ ಸುಭದ್ರಮ್ಮನವರೊಂದಿಗೆ ನಕ್ಕಿತು.

## ಮಧುರಾ ಕರ್ಣಮ್

ಕಥೆಗಾರ್ತಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ, ಎಲ್.ಎಲ್.ಬಿ. ವರೆಗೆ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...' 'ಆಕ್ರಮಣ' ಅವರ ಕೆಲವು ಕೃತಿಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.